**<u>ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ</u>**

**ಸಿ.ಸಿ : 1/2022**

**ಸಾಕ್ಷಿದಾರರ ಹೆಸರು : ಕೀರ್ತಿಕುಮಾರ್**

**ಸಿ.ಡಬ್ಲ್ಯೂ - 9**

**ತಂದೆಯ ಹೆಸರು : ದುಗ್ಗೇಗೌಡ**

**ಪಿ.ಡಬ್ಲ್ಯೂ - 8**

**ವಯಸ್ಸು : 48 ವರ್ಷ**

**ಉದ್ಯೋಗ : ಪಿ ಎಸ್ ಐ, ಆಲ್ದೂರು ಪೊಲೀಸ್ ಠಾಣೆ**

**ವಾಸಸ್ಥಳ : ಆಲ್ದೂರು**

**ದಿನಾಂಕಃ 05.09.2023 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>:: ಮುಖ್ಯ ವಿಚಾರಣೆ : ಮಾನ್ಯ : ಎಪಿಪಿಯವರಿಂದ ::</u>**

ನಾನು 2020 ರಿಂದ 2021 ರವರೆಗೆ ಶೃಂಗೇರಿ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 02.12.2020 ರಂದು ಈ ಪ್ರಕರಣದ ಚಾಸಾ-1 ತಮ್ಮ ಕಚೇರಿಯ ಸಿಬ್ಬಂದಿಯಾದ ಹೆಚ್ ಜಿ ಸುರೇಶ್ ರವರ ಮೂಲಕ ದೂರನ್ನು ದಾಖಲಿಸಿದ್ದು, ನಾನು ಸದರಿ ದೂರಿನ ಆಧಾರದ ಮೇಲೆ ಆರೋಪಿಯ ವಿರುದ್ಧ ಠಾಣಾ ಗುನ್ನೆ ನಂಃ 63/2020 ರಂತೆ ಕಲಂ 447, 434 ಭಾರತೀಯ ದಂಡ ಸಂಹಿತೆ ಹಾಗೂ ಕಲಂ 3 ಮತ್ತು 4 ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ 2011 ಹಾಗೂ ಕಲಂ 192(ಎ) ಮತ್ತು (ಬಿ) ಕರ್ನಾಟಕ ಭೂ ಕಂದಾಯ ಅಧಿನಿಯಮ ರೀತ್ಯಾ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿಕೊಂಡು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಮತ್ತು ಪ್ರತಿಗಳನ್ನು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-16, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

ಅದೇ ದಿನ ಕೃತ್ಯ ಸ್ಥಳವಾದ ಶೃಂಗೇರಿ ಗ್ರಾಮಾಂತರ ವ್ಯಾಪ್ತಿಗೆ ಬರುವ ಸರ್ಕಾರಿ ಸರ್ವೆ ನಂಃ 215 ರಲ್ಲಿ ಬರುವ ಶಾರದನಗರದ ಶ್ರೀ ಚೌಡೇಶ್ವರಿ ದೇವಸ್ಥಾನದ ಪಕ್ಕದಲ್ಲಿರುವ 2 ಗುಂಟೆ ಜಾಗ ಆಗಿದ್ದು, ಸದರಿ ಸ್ಥಳದಲ್ಲಿ ಪಂಚರಾಗಿ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿರುವ ಸ್ಥಳದಲ್ಲಿ ಮಹಜರ್ ಕ್ರಮವನ್ನು ಬೆಳಗ್ಗೆ 10 ರಿಂದ 11 ಗಂಟೆಯವರೆಗೆ ಜರುಗಿಸಿ ಮಹಜರ್ ಮಾಡಿ ನಕಾಶೆ ತಯಾರಿಸಿ, ಪೋಟೋ ತೆಗೆದಿರುತ್ತೇನೆ. ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಪೋಟೋವನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿರುತ್ತದೆ.

ದಿನಾಂಕಃ 24.12.2020 ರಂದು ಚಾಸಾ-1 ರವರಿಗೆ ದಿನಾಂಕಃ 01.01.2018 ರಿಂದ ಶೃಂಗೇರಿ ತಾಲ್ಲೂಕು, ಕಸಬಾ ಹೋಬಳಿ ಯಲ್ಲಿ ಕಾರ್ಯನಿರ್ವಹಿಸಿರುವ ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು, ಸರ್ವೇಯರ್ ರವರುಗಳ ಹೆಸರು ಮತ್ತು ವಿಳಾಸ ಹಾಗೂ ಇತರೆ ಮಾಹಿತಿ ಬಗ್ಗೆ ಕೋರಿ ಮನವಿ ಸಲ್ಲಿಸಿರುತ್ತೇನೆ. ಸಾಕ್ಷಿ ಮನವಿಯನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಂತರ ಚಾಸಾ-10 ರವರಿಗೆ ಮುಂದಿನ ತನಿಖೆಗಾಗಿ ಕಡತವನ್ನು ವಹಿಸಿಕೊಟ್ಟಿರುತ್ತೇನೆ.

## <u>ಪಾಟೀ ಸವಾಲು ಆರೋಪಿ ಪರ ಶ್ರೀ.ಎಸ್ ಕೆ ಎಂ ವಕೀಲರಿಂದ ಃ</u>

ಕೃತ್ಯ ನಡೆದ ಸ್ಥಳದಲ್ಲಿಯಾವುದಾದರೂ ಕಾಮಗಾರಿ ನಡೆದಿದೆ ಎಂದರೆ ಜೆ ಸಿ ಬಿ ಮತ್ತು ಟ್ರ್ಯಾಕ್ಟರ್ ನ ಟೈರ್ ನ ಗುರುತುಗಳು ಕಂಡು ಬಂದಲ್ಲಿ ಮಹಜರ್ ನಲ್ಲಿ ನಮೂದು ಮಾಡುತ್ತಿದ್ದೆವು ಎಂದರೆ ಸಾಕ್ಷಿಯು ಆ ರೀತಿ ಗುರುತುಗಳು ಕಂಡು ಬಂದಿರುತ್ತದೆ. ಮಹಜರ್ ನಲ್ಲಿ ತೋರಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಹೇಳಲಾದ ಕೃತ್ಯ ನಡೆದ ದಿನದಿಂದ ಎರಡು ವರ್ಷಗಳ ನಂತರ ಪೋಟೋಗಳನ್ನು ತೆಗೆದಿರುತ್ತೇವೆ. ಸರ್ಕಾರ ತಡಗೋಡೆ ನಿರ್ಮಾಣ ಮಾಡುವ ಸಮಯದಲ್ಲಿ ನಿಪಿ-3 ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ತಹಶೀಲ್ದಾರ್ ರವರ ಪ್ರಭಾವಕ್ಕೆ ಒಳಗಾಗಿ ಸುಳ್ಳು ಪ್ರಥಮ ವರ್ತಮಾನ ವರದಿ ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ನಾನು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ಪಂಚರಿಗೆ ಮತ್ತು ಚಾಸಾ-1 ರವರಿಗೆ ಕೃತ್ಯ ನಡೆದ ಸ್ಥಳಕ್ಕೆ ಬರಲು ನೋಟೀಸು ನೀಡಿರುವುದಿಲ್ಲ, ಆದರೆ ಮೌಖಿಕವಾಗಿ ಹೇಳಿರುತ್ತೇನೆ. ನಿಪಿ-2 ಮತ್ತು 3 ನ್ನು ಠಾಣೆಯಲ್ಲಿ ಸೃಷ್ಟಿ

ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ-4 ರಂತೆ ನಾನು ಯಾವುದೇ ಮನವಿ ಚಾಸಾ-1 ರವರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಕಾಶೆಯನ್ನು ನಾನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ಆರೋಪಿಗೂ ಪ್ರಸ್ತುತ ಪ್ರಕರಣಕ್ಕೂ ಯಾವುದೇ ರೀತಿಯ ಸಂಬಂಧ ಇಲ್ಲ ಚಾಸಾ-1 ರವರ ಪ್ರಭಾವದ ಮೇರೆಗೆ ಪ್ರಕರಣ ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ.

**ಃಮರುವಿಚಾರಣೆ ಇಲ್ಲಃ**

**(ದಿನಾಂಕಃ 05.09.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**